ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 07-12-1978.

# *ತಂದೆಯ ಸಮಾನ ಸಂಪೂರ್ಣರಾಗುವ ಗುರುತುಗಳು*

(बाप समान सम्पूर्ण बनने के चिन्ह)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಸದಾ ಸರ್ವರಿಗೆ ಉಪಕಾರ ಮಾಡುವ ಬಾಪ್‌ದಾದಾ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಸದಾ ನಿಮ್ಮ ಸ್ಮೃತಿಯ ಶಕ್ತಿಯಿಂದ ನಿಮ್ಮ ಮೂರೂ ಸ್ಥಾನಗಳು, ಮೂರೂ ಸ್ಥಿತಿಗಳು ಎಂದರೆ ನಿರಾಕಾರಿ, ಅಕಾರಿ ಹಾಗೂ ಸಾಕಾರಿ ಈ ಮೂರೂ ಸ್ಥಿತಿಗಳಲ್ಲಿ ಸಹಜವಾಗಿ ಸ್ಥಿತರಾಗಬಲ್ಲಿರಾ? ಹೇಗೆ ನಿಮ್ಮ ಆದಿ ಸ್ಥಿತಿಯಾದ ಸಾಕಾರ ಸ್ವರೂಪದಲ್ಲಿ ಸಹಜವಾಗಿಯೇ ಸ್ಥಿತರಾಗಿರುತ್ತೀರೋ ಹಾಗೆಯೇ ಅನಾದಿಯಾದ ನಿರಾಕಾರ ಸ್ಥಿತಿಯೂ ಸಹ ಅಷ್ಟೇ ಸಹಜವಾದುದು ಎನ್ನುವ ಅನುಭವ ಆಗುತ್ತಿದೆಯೇ? ಈಗ ತಾನೇ ಅನಾದಿ ಮತ್ತೆ ಇದೀಗಲೇ ಆದಿ. ಎರಡೂ ಸ್ಥಿತಿಗಳಲ್ಲಿ ಸಮಾನತೆಯ ಅನುಭವ ಆಗಬೇಕು. ಅಂತಹ ಅನುಭವವನ್ನು ಮಾಡುತ್ತಿರುತ್ತೀರಾ? ಹೇಗೆ ಸಾಕಾರ ಸ್ವರೂಪವು ನಿಮಗೆ ಸ್ವಾಭಾವಿಕ ಎಂಬ ಅನುಭವ ಆಗುತ್ತದೆಯೋ ಅದರಲ್ಲಿ ಸ್ಥಿತ ಆಗುವುದು ಸ್ವಾಭಾವಿಕ ಎಂಬ ಅನುಭವ ಮಾಡುತ್ತೀರೋ ಹಾಗೆಯೇ ನಿಮ್ಮ ಅನಾದಿ ನಿರಾಕಾರೀ ಸ್ವರೂಪದಲ್ಲಿ, ಯಾವುದು ಸದಾ ಒಂದೇ ಅವಿನಾಶಿ ಸ್ವರೂಪ ಆಗಿದೆಯೋ, ಆ ಸದಾ ಒಂದೇ ಆದ ಅವಿನಾಶೀ ಸ್ವರೂಪದಲ್ಲಿ ಸ್ಥಿತ ಆಗುವುದೂ ಸಹ ಸ್ವಾಭಾವಿಕವಾಗಬೇಕು. ಸಂಕಲ್ಪ ಮಾಡಿದಕೂಡಲೇ ಸ್ಥಿತ ಆಗಿಬಿಡಬೇಕು. ತಂದೆಯ ಸಮಾನ ಸಂಪೂರ್ಣ ಅವಸ್ಥೆ, ಕರ್ಮಾತೀತವಾದ ಅಂತಿಮಸ್ಥಿತಿಗೆ ಎಷ್ಟು ಸಮೀಪ ತಲುಪಿದ್ದೇನೆ ಎಂದು ನಿಮ್ಮನ್ನು ನೀವೇ ಕೇಳಿಕೊಳ್ಳಿರಿ. 'ಸಂಪೂರ್ಣ ಅವಸ್ಥೆಗೆ ಎಷ್ಟು ಸಮೀಪ ಆಗಿರುತ್ತೀರೋ ಎಂದರೆ ತಂದೆಗೆ ಎಷ್ಟು ಸಮೀಪ ಆಗಿರುವಿರೋ ಅದರ ಅನುಸಾರವಾಗಿಯೇ ಭವಿಷ್ಯ ಪ್ರಾರಬ್ಧದಲ್ಲಿಯೂ ಸಹ ರಾಜ್ಯಾಧಿಕಾರಿ ಆಗುವಿರಿ, ಜೊತೆ ಜೊತೆಗೆ ಆದಿ ಭಕ್ತಜೀವನದಲ್ಲಿಯೂ ಸಹ ಸಮೀಪ ಸಂಬಂಧದಲ್ಲಿ ಇರುವಿರಿ. ಪೂಜ್ಯ ಅಥವಾ ಪೂಜಾರಿ ಎರಡೂ ಜೀವನದಲ್ಲಿ ಸಾಕಾರ ತಂದೆಯ ಸಮೀಪ ಇರುವಿರಿ ಎಂದರೆ ಇಡೀ ಕಲ್ಪದಲ್ಲಿ ಆದಿಯ ಆತ್ಮನ ಸಂಬಂಧ ಅಥವಾ ಸಂಪರ್ಕದಲ್ಲಿ ಇರುವಿರಿ. ನಾಯಕ ಪಾತ್ರಧಾರಿ ಆತ್ಮರ ಜೊತೆ ಜೊತೆಗೆ ನಿಮ್ಮದೂ ಸಹ ಭಿನ್ನ ನಾಮ, ರೂಪದಿಂದ ವಿಶೇಷ ಪಾತ್ರವು ನಡೆಯುವುದು. ಈಗಿನ ಸಂಪೂರ್ಣ ಸ್ಥಿತಿಯ ಸಮೀಪತೆಯೊಂದಿಗೆ ಎಂದರೆ ಬಾಪ್‌ದಾದಾರವರ

ಸಮೀಪತೆಯ ಆಧಾರದೊಂದಿಗೆ ಇಡೀ ಕಲ್ಪದ ಸಮೀಪತೆಯ ಆಧಾರ ಅವಲಂಬಿಸಿದೆ. ಆದ್ದರಿಂದ ಎಷ್ಟುಬೇಕಾದರೆ ಅಷ್ಟು ನಿಮ್ಮ ಕಲ್ಪದ ಪ್ರಾರಬ್ಧವನ್ನು ರೂಪಿಸಿಕೊಳ್ಳಿರಿ. ಸಮೀಪತೆಯ ಆಧಾರವು ಶ್ರೇಷ್ಠತೆ ಆಗಿದೆ. ಶ್ರೇಷ್ಠತೆಯ ಆಧಾರವಾಗಿ ನಿಮ್ಮ ಮರುಜೀವಾ ಜೀವನದಲ್ಲಿ ವಿಶೇಷವಾಗಿ ಎರಡು ಅಂಶಗಳ ಪರಿಶಿಲನೆಯನ್ನು ಮಾಡಿರಿ. ಒಂದನೆಯದಾಗಿ ಸದಾ ಪರೋಪಕಾರಿಯಾಗಿ ಇರುತ್ತಾ ಬಂದಿದ್ದೀರಾ? ಎರಡನೆಯಾದಾಗಿ ಆದಿಯಿಂದ ಈಗ ಅಂತ್ಯದವರೆಗೆ ಸದಾ ಬಾಲಬ್ರಹ್ಮಚಾರಿ ಆಗಿ ಇರುತ್ತಾ ಬಂದಿದ್ದೀರಾ? ಇವರು ಮರುಜೀವಾ ಜೀವನದ ಆದಿಕಾಲದಿಂದ ಎಂದರೆ ಬಾಲ್ಯಕಾಲದಿಂದ ಇಲ್ಲಿಯವರೆಗೆ ಸದಾ ಬ್ರಹ್ಮಾರವರ ಸಮಾನ ಪವಿತ್ರ ಜೀವನ, ಅಂತಹವರನ್ನು ಬ್ರಹ್ಮಚಾರಿ ಎಂದಾದರೂ ಕರೆಯಬಹುದು ಅಥವಾ ಬ್ರಹ್ಮಾಚಾರಿ ಎಂದಾದರೂ ಕರೆಯಬಹುದು. ಆದಿಯಿಂದ ಅಂತ್ಯದವರೆಗೆ ಅಖಂಡ ಬ್ರಹ್ಮಚಾರಿಯಾಗಿ ಇದ್ದೀರಾ? ಒಂದುವೇಳೆ ಪದೇ ಪದೇ ಬ್ರಹ್ಮಚರ್ಯವು ಖಂಡಿತವಾಗುತ್ತಾ ಬಂದಿದ್ದರೆ ಬಾಲಬ್ರಹ್ಮಾಚಾರಿ ಅಥವಾ ಸದಾ ಬ್ರಹ್ಮಚಾರಿ ಎಂದು ಹೇಳಿಕೊಳ್ಳಲು ಸಾಧ್ಯವಿಲ್ಲ. ತಂದೆಯ ಸಮಾನ ಆಗದಿರುವ ಕಾರಣ ಸಮೀಪದ ಸಂಬಂಧದಲ್ಲಿ ಬರಲು ಸಾಧ್ಯವಿಲ್ಲ. ಆದ್ದರಿಂದ ಶ್ರೇಷ್ಠತೆಯ ಆಧಾರವು ಸಮೀಪತೆಯ ಆಧಾರವು ಬಾಲಬ್ರಹ್ಮಚಾರಿ ಎಂದರೆ ಸದಾ ಬ್ರಹ್ಮಾಚಾರಿ( ಬ್ರಹ್ಮನನ್ನು ಆಚರಿಸುವವರು) ಆಗಿರುವುದು. ಅದನ್ನೇ ತಂದೆಯನ್ನು ಅನುಸರಿಸುವುದು ಎಂದು ಕರೆಯಬಹುದು. ಆದ್ದರಿಂದ ನಾನು ಅಖಂಡ ಬ್ರಹ್ಮಚಾರಿ ಆಗಿದ್ದೇನೆಯೇ ಎಂದು ನಿಮ್ಮನ್ನು ಪರಿಶೀಲಿಸಿಕೊಳ್ಳಿರಿ. ಅಖಂಡ ಆಗಿರುವವರಿಗೆ ಸರ್ವಪ್ರಾಪ್ತಿಗಳೂ ಸಹ ಅಖಂಡವಾಗಿ ಅನುಭವ ಆಗುತ್ತವೆ. ಭಂಗ ಆಗಿರುವ ಪುರುಷಾರ್ಥಯ ಪ್ರಾಪ್ತಿಗಳೂ ಸಹ ಅಲ್ಪಕಾಲದವು ಅನುಭವ ಆಗುತ್ತವೆ. ನನ್ನ ಖಾತೆಯು ಸದಾ ಸ್ವಚ್ಛ ಆಗಿದೆಯೇ ಎಂದು ಪರಿಶೀಲನೆ ಮಾಡಿಕೊಳ್ಳಿರಿ. ಯಾವುದೇ ಪ್ರಕಾರದ ದೋಷದಿಂದ ನಿಮ್ಮ ಖಾತೆಯನ್ನು ಕಲುಷಿತಗೊಳಿಸಿಕೊಳ್ಳಲಿಲ್ಲವೇ. ಸದಾ ಬ್ರಹ್ಮಚಾರಿ ಎಂದರೆ ಸಂಕಲ್ಪದಲ್ಲಿಯೂ ಸಹ ಯಾವುದೇ ಪ್ರಕಾರದ ಅಪವಿತ್ರತೆಯು ವೃತ್ತಿಯನ್ನು ಚಂಚಲ ಮಾಡಲಿಲ್ಲವೇ, ಮೊದಲನೆಯ ಸೋಲು ವೃತ್ತಿಯ ಚಂಚಲತೆ ಆಗಿದೆ. ಅನಂತರ ದೃಷ್ಟಿ ಹಾಗೂ ವೃತ್ತಿಯ ಚಂಚಲತೆ ಆಗುತ್ತದೆ. ವೃತ್ತಿಯ ಚಂಚಲತೆಯು ಖಾತೆಯಲ್ಲಿ( ಸಂಸ್ಕಾರವೆಂಬ ರೆಜಿಸ್ಟರ್) ಮಚ್ಚೆ ಬೀಳುವ ಹಾಗೆ ಮಾಡುತ್ತದೆ. ಆದ್ದರಿಂದ ವೃತ್ತಿಯಿಂದಲೂ ಸದಾ ಬ್ರಹ್ಮಾಚಾರಿ ಆಗಿರಬೇಕು.

ಇಂದು ಬಾಪ್‌ದಾದಾ ಮಕ್ಕಳ ಈ ಖಾತೆಯನ್ನು ನೋಡುತ್ತಾ ಇದ್ದಾರೆ. ಎಷ್ಟು ಮಕ್ಕಳು ಸದಾ ಬ್ರಹ್ಮಚಾರಿ ಆಗಿದ್ದೀರಿ ಹಾಗೂ ಎಷ್ಟು ಬ್ರಹ್ಮಚಾರಿ ಆಗಿದ್ದೀರಿ ಎಂದು ನೋಡುತ್ತಾ ಇದ್ದೆವು. ಬಾಲಬ್ರಹ್ಮಚಾರಿಗೆ ಮಹತ್ವ ಇರುತ್ತದೆ. ಬಾಲಬ್ರಹ್ಮಚಾರಿಯು ವರ್ತಮಾನ ಸಮಯದಲ್ಲಿಯೂ ಸಹ ಪೂಜ್ಯ ಆಗಿದ್ದಾರೆ ಎಂದರೆ ಶ್ರೇಷ್ಠ ಆಗಿದ್ದಾರೆ. ಬಾಪ್ ದಾದಾ ಸಹ ಅಂತಹ ಮಕ್ಕಳನ್ನು ಪೂಜ್ಯರೂಪದಲ್ಲಿ ನೋಡುತ್ತೇವೆ. ವಿಶ್ವದ ಮುಂದೆಯೂ ಸಹ ಈಗ ಅಂತ್ಯದಲ್ಲಿ ಪೂಜ್ಯರ ರೂಪದಲ್ಲಿ ಪ್ರತ್ಯಕ್ಷ ಆಗುವರು. ತಂದೆಯ ಮುಂದೆ ಪೂಜ್ಯ ಎಂದು ಪ್ರಸಿದ್ಧ ಆಗುವವರು ಸದಾ ಸಮೀಪ ಸಂಬಂಧದಲ್ಲಿ ಇರುತ್ತಾರೆ. ಈ ಪ್ರಕಾರದಲ್ಲಿ ನಿಮ್ಮ ಖಾತೆಯನ್ನು ನೋಡಿಕೊಳ್ಳಿರಿ. ಎರಡನೆಯದಾಗಿ ಪರೋಪಕಾರಿ ಎನ್ನುವುದರ ವಿಸ್ತಾರವು ಬಹಳ ಗುಹ್ಯವಾಗಿದೆ. ಇದರ ವಿಸ್ತಾರವನ್ನು ಸ್ವಯಂ ನೀವೂ ಅಲೋಚಿಸಿರಿ. ವಿಶ್ವದ ಬಗ್ಗೆ ಹಾಗೂ ಬ್ರಾಹ್ಮಣ ಪರಿವಾರದ ಬಗ್ಗೆ ಎರಡೂ ಸಂಬಂಧದಲ್ಲಿ ಸದಾ ಪರೋಪಕಾರಿ ಆಗಿದ್ದೀರಾ? ಅಥವಾ ಒಮ್ಮೊಮ್ಮೆ ಸ್ವ-ಉಪಕಾರಿ ಹಾಗೂ ಒಮ್ಮೊಮ್ಮೆ ಪರೋಪಕಾರಿ ಅಗಿದ್ದೀರೋ? ವಾಸ್ತವದಲ್ಲಿ ಪರೋಪಕಾರವೇ ಸ್ವ ಉಪಕಾರವಾಗಿದೆ. ನಿಮ್ಮ ಖಾತೆಯನ್ನು ಪರಿಶೀಲಿಸಿಕೊಳ್ಳಿರಿ. ಅನಂತರ ಬಾಪ್‌ದಾದಾ ಸಹ ತಿಳಿಸುತ್ತಾರೆ. ತಿಳಿಯಿತೇ, ಒಳ್ಳೆಯದು.

**ಸದಾ ತಮ್ಮ ಅನಾದಿ ಹಾಗೂ ಆದಿ ಸ್ವರೂಪದಲ್ಲಿ ಸಹಜವಾಗಿ ಸ್ಥಿತ ಆಗುವವರು, ಸದಾ ಸ್ವಚ್ಛ ಹಾಗೂ ಸ್ಪಷ್ಟ ಆಗಿರುವ ಪೂಜ್ಯ ಆತ್ಮರು ಇಡೀ ಕಲ್ಪದಲ್ಲಿ, ಸಂಬಂಧದಲ್ಲಿ ಬರುವ ಆತ್ಮರು, ಸದಾ ಬ್ರಹ್ಮಾಚಾರಿ ಮಕ್ಕಳಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ಶಿಕ್ಷಕರೊಂದಿಗೆ**: ಶಿಕ್ಷಕರಿಗೆ ವಿಶೇಷ ಲಿಫ್ಟ್ ಇದೆ. ಏಕೆಂದರೆ ಶಿಕ್ಷಕರ ಕರ್ತವ್ಯವೇ ಸರ್ವ ಆತ್ಮರಿಗೆ ಮಾರ್ಗದರ್ಶನ ಮಾಡುವುದಾಗಿದೆ. ಆದ್ದರಿಂದ ಹಗಲೂರಾತ್ರಿ ಒಂದೇ ಸಂಬಂಧದಲ್ಲಿ ಇರುವವರು, ಒಬ್ಬರದೇ ನೆನಪು ಹಾಗೂ ಒಂದೇ ಕಾರ್ಯ ಮಾಡುವವರಿಗೆ ಇದರಿಂದ ಏಕರಸ ಸ್ಥಿತಿಯು ಸಹಜವಾಗಿಯೇ ರೂಪುಗೊಳ್ಳುತ್ತದೆ. ಒಬ್ಬರ ಸಂಬಂಧದಲ್ಲಿ ಇರುವುದರಿಂದ ಸಹಜವಾಗಿ ಮೇಲೆ

ಅಥವಾ ಗುರಿಯ ಅನುಭವ ಆಗುತ್ತದೆ. ಒಂದೇ ಒಂದು ಆಗಿರುವುದರಿಂದ ಸಹಜಮಾರ್ಗ ಆಗಿಬಿಡುತ್ತದೆ. ಅಲ್ಲವೇ. ಒಂದು ಸೆಕೆಂಡ್‌ನಲ್ಲಿ ಸ್ವಿಚ್ ಹಾಕಿ ನೆಲೆಯನ್ನು ತಲುಪಿಬಿಡಬಹುದು. ಅಲೋಚನೆ ಮಾಡಿದಕೂಡಲೆ ಸ್ವರೂಪ ಆಗಿಬಿಡುವುದೇ ಲಿಫ್ಟ್ ಆಗಿದೆ. ಶಿಕ್ಷಕರು ತಮ್ಮ ಭಾಗ್ಯವನ್ನು ನೋಡಿಕೊಂಡು ಸದಾ ತಂದೆಯ ಗುಣಗಾನ ಮಾಡಬೇಕು. ಎಂತಹ ತಂದೆ ಹಾಗೂ ಎಂತಹ ನಾಟಕ ಎನ್ನುವ ಗೀತೆಯೇ ಸದಾ ಪ್ರತಿಧ್ವನಿಸುತ್ತಿರಲಿ. ಇದೆ ಆನಂದದಲ್ಲಿ ಶರೀರದ ಬಂಧನವೇ ಆಗಲಿ ಅಥವಾ ಮನಸ್ಸಿನ ಬಂಧನವೇ ಆಗಲಿ ಯಾವುದೂ ಅವರಿಸುವುದಿಲ್ಲ. ಸದಾ ಕಾರ್ಯತತ್ಪರರಾಗಿರುವುದರಿಂದ ಯಾವುದೇ ಪ್ರಕಾರದ ಮಾಯೆಯ ಧಾಳಿಯು ನಡೆಯಲು ಸಾಧ್ಯವಿಲ್ಲ. ಮಾಯೆಗೆ ಸೋಲಾಗುವುದೇ ಹೊರತು ಅದು ಧಾಳಿ ಮಾಡಲಾರದು.

(1) **ಸಮೀಪ ಆತ್ಮರಿಗೆ ಪುರುಷಾರ್ಥವೂ ಸಹ ಒಂದು ಮನೋರಂಜನೆಯ ಸಾಧನ ಆಗುತ್ತದೆ:** ಬ್ರಹ್ಮಾಬಾಬಾರವರ ಮೊದಲನೆಯ ವಿಶೇಷತೆಯು ನಷ್ಟಮೋಹ ಆಗಿದೆ. ಅದರ ಆಧಾರದಿಂದಲೇ ಅವರು ಸದಾ ಸ್ಮೃತಿಸ್ವರೂಪರಾದರು. ಹಾಗೆಯೇ ನೀವು ತಂದೆಯನ್ನು ಅನುಸರಿಸುತ್ತೀರಾ? ಈ ವಿಶೇಷತೆಯ ಆಧಾರದಿಂದಲೇ ಸಮೀಪ ಆತ್ಮ ಆಗಿಬಿಡುವಿರಿ. ಸ್ವಯಂ ನಿಮ್ಮೊಂದಿಗೆ ಹಾಗೂ ಸರ್ವರೊಂದಿಗೆ ನಷ್ಟಮೋಹ ಆಗುವುದರಿಂದ ಸಮೀಪ ಆತ್ಮರಿಗೆ ಸಹಜವಾಗಿಯೇ ಸರ್ವಪ್ರಾಪ್ತಿಗಳಾಗುತ್ತವೆ. ಅವರಿಗೆ ಪುರುಷಾರ್ಥವೂ ಸಹ ಒಂದು ಆಟದಂತೆ ಅನುಭವ ಆಗುತ್ತದೆ, ಕಷ್ಟ ಎನಿಸುವುದಿಲ್ಲ. ಪುರುಷಾರ್ಥ ಮಾಡುವುದೂ ಸಹ ಒಂದು ಮನೋರಂಜನೆ ಎಂದೆನಿಸುತ್ತದೆ. ಸಾಧಾರಣ ರೀತಿಯಲ್ಲಿ ಲೆಕ್ಕ ಮಾಡುವುದಕ್ಕೂ ಹಾಗೂ ಮನೋರಂಜನೆಯ ರೀತಿಯಿಂದ ಲೆಕ್ಕ ಮಾಡುವುದಕ್ಕೂ ವ್ಯತ್ಯಾಸ ಇರುತ್ತದೆ ಅಲ್ಲವೇ. ಹಾಗೆಯೇ ಸಮೀಪ ಆತ್ಮರಿಗೆ ಪುರುಷಾರ್ಥವು ಮನೋರಂಜನೆ ಎನ್ನುವ ಅನುಭವ ಆಗುತ್ತದೆ. ಸಮೀಪ ಆತ್ಮನ ಮುಖ್ಯ ಲಕ್ಷಣವು ಆದಿಯಿಂದ ಅಂತ್ಯದವರೆಗೆ ಕಷ್ಟದ ಅನುಭವ ಆಗದೇ ಇರುವುದು.

(2) **ಸಫಲತೆಯ ಆಧಾರವು ಸಾಕ್ಷಿ ಹಾಗೂ ಜೊತೆಗಾರತನದ ಅನುಭವ ಆಗಿದೆ:** ಸದಾ ನಿಮ್ಮನ್ನು ತಂದೆಯ ಜೊತೆಗಾರರೆಂದು ತಿಳಿದುಕೊಂಡು ನಡೆಯುತ್ತೀರಾ? ಒಂದು ವೇಳೆ ಜೊತೆಗಾರತನದ ಅನುಭವ ಆದರೆ ಸಾಕ್ಷೀತನದ ಅನುಭವವೂ ಸಹ ಆಗುವುದು. ಏಕೆಂದರೆ ತಂದೆಯ ಜೊತೆ ಇರುವ ಕಾರಣದಿಂದ ಹೇಗೆ ತಂದೆಯು ಸಾಕ್ಷಿ ಆಗಿ ಪಾತ್ರವನ್ನು ಅಭಿನಯಿಸುತ್ತೇನೋ ಹಾಗೆಯೇ ನೀವೂ ಸಹ ಜೊತೆಗಾರರಾಗಿರುವ ಕಾರಣದಿಂದ ಸಾಕ್ಷಿಯಾಗಿ ಪಾತ್ರವನ್ನು ಅಭಿನಯಿಸುವಿರಿ. ಈ ಎರಡೂ ಅನುಭವಗಳನ್ನು ಅನುಭವ ಮಾಡುತ್ತೀರಿ. ನಾನು ಒಂಟಿಯಾಗಿಲ್ಲ ಸದಾ ಸರ್ವಶಕ್ತಿವಂತನ ಜೊತೆ ನನಗೆ ಇದೆ ಎನ್ನುವ ಅನುಭವ ಆಗುತ್ತದೆ. ಎಲ್ಲಿ ಜೊತೆ ಇರುತ್ತದೆಯೋ ಅಲ್ಲಿ ಸಫಲತೆಯು ತಾನಾಗಿಯೇ ಆಗಿಬಿಟ್ಟಿರುತ್ತದೆ. ಸ್ವಲ್ಪ ಸಮಯದವರೆಗೆ ಜೊತೆಯ ಅನುಭವವನ್ನು ಮಾಡಿಸು, ದರ್ಶನವನ್ನು ಮಾಡಿಸು ಎಂದು ಭಕ್ತಿ ಮಾರ್ಗದಲ್ಲಿಯೂ ಮೊರೆ ಇಡುತ್ತಾರಲ್ಲವೇ. ಆದರೆ ಈಗ ಏನು ಆಯಿತು? ಸರ್ವ ಸಂಬಂಧಗಳಿಂದ ಜೊತೆಗಾರ ಆಗಿಬಿಟ್ಟಿದ್ದೇನೆ. ದರ್ಶನ ಅಥವಾ ಸಾಕ್ಷಾತ್ಕಾರವು ಅಲ್ಪಕಾಲದವರೆಗೆ ಆಗುತ್ತದೆ. ಆದರೆ ಸಂಬಂಧವು ಸದಾ ಕಾಲದ್ದಾಗಿರುತ್ತದೆ. ಈಗ ನೀವು ತಂದೆಯ ಸಮೀಪ ಸಂಬಂಧದಲ್ಲಿ ಬಂದಿದ್ದೀರೋ ಅಥವಾ ಇನ್ನೂ ಜಿಜ್ಞಾಸು ಆಗಿದ್ದೀರೋ, ಜಿಜ್ಞಾಸುವು ಎಲ್ಲಿಯವರೆಗೆ ಇರುತ್ತದೆ ಎಂದರೆ ಪ್ರಾಪ್ತಿಯು ಆಗದೇ ಇರುವವರೆಗೆ. ಈಗ ನೀವು ಜಿಜ್ಞಾಸು ಅಲ್ಲ ಅಧಿಕಾರಿ ಆಗಿದ್ದೀರಿ. ಪ್ರತಿ ಸೆಕೆಂಡ್ ಜೊತೆ ಇದೆ. ಪ್ರತಿ ಸೆಕೆಂಡ್‌ನ ಸಂಬಂಧದ ಕಾರಣದಿಂದ ಸಮೀಪ ಆಗಿದ್ದೀರಿ. ಜೀವನದಲ್ಲಿ ಸಂಗಾತಿಯನ್ನು ಹುಡುಕುತ್ತಾರೆ ಹಾಗೂ ಸಂಗಾತಿಯ ಆಧಾರದಿಂದಲೇ ತಮ್ಮ ಜೀವನವನ್ನು ವ್ಯತೀತ ಮಾಡುತ್ತಾರೆ. ಈಗ ಎಂತಹ ಸಂಗಾತಿಯನ್ನು ಮಾಡಿಕೊಂಡಿದ್ದೀರಿ? ಅವಿನಾಶಿ ಸಂಗಾತಿ ಅಲ್ಲವೇ. ಬೇರೆಯಾವ ಸಂಗಾತಿಯೂ ಸಮಯಕ್ಕೆ ಸರಿಯಾಗಿ ಅಥವಾ ಸದಾ ನಿಮ್ಮಬಳಿ ತಲುಪಲು ಸಾಧ್ಯವಿಲ್ಲ, ಆದರೆ ಬಾಪ್ ದಾದಾರವರು ಸದಾ ಹಾಗೂ ಸೆಕೆಂಡ್‌ನಲ್ಲಿ ತಲುಪಬಲ್ಲರು. ಇದು ಜನ್ಮ ಜನ್ಮದ ಜೊತೆ ಆಗಿದೆ. ಭವಿಷ್ಯದಲ್ಲಿಯೂ ಸಹ ಬ್ರಹ್ಮಾಬಾಬಾರವರ ಜೊತೆ ಇರುವುದಲ್ಲವೇ. ತಂದೆ ಶಿವನು ಸಾಕ್ಷಿ ಆಗಿಬಿಡುವನು ಹಾಗೂ ಬ್ರಹ್ಮಾಬಾಬಾರವರು ಜೊತೆಗಾರ ಆಗಿಬಿಡುವರು. ಈಗ ಇಬ್ಬರೂ ಜೊತೆಗಾರ ಆಗಿದ್ದೇವೆ. ಹೀಗೆ ಅನುಭವ ಮಾಡುವವರು ಸದಾ ಖುಷಿಯಿಂದ ಇರುತ್ತೀರಿ. ಏನು ಪಡೆಯಬೇಕಾಗಿತ್ತೋ ಅದನ್ನು ಪಡೆದುಬಿಟ್ಟಿದ್ದೀರಿ ಆದ್ದರಿಂದ ಖುಷಿ ಇರುವುದಲ್ಲವೇ. ಪಡೆದಿದ್ದೀರಿ, ಆದರೆ ತಂದೆಯ ಸಮಾನರನ್ನಾಗಿ ನಿಮ್ಮನ್ನು ಮಾಡಿಕೊಳ್ಳುವುದು ಉಳಿದಿದೆ. ಇದರಲ್ಲಿ ಅನುಕ್ರಮ(ನಂಬರ್ ವಾರ್) ಇದೆ.

ಶಕ್ತಿಸೈನ್ಯಕ್ಕೆ ಬಾಪ್‌ದಾದಾ ವಿಶೇಷ ವೃದ್ಧಿ ಕಲೆಯ ಸಹಯೋಗವನ್ನು ನೀಡುತ್ತೇವೆ. ಏಕೆಂದರೆ ಶಕ್ತಿಯರನ್ನು, ಮಾತೆಯರನ್ನು ಎಲ್ಲರೂ ಕೆಳಕ್ಕೆ ಉರಳಿಸಿದ್ದಾರೆ. ಈಗ ತಂದೆಯು ಬಂದು ಮೇಲಕ್ಕೆ ಹತ್ತಿಸುತ್ತೇನೆ. ನನಗಿಂತಲೂ ಮುಂದೆ ಶಕ್ತಿಯರನ್ನು ಇಡುತ್ತೇನೆ. ಆದ್ದರಿಂದ ಶಕ್ತಿಯರಿಗೆ ವಿಶೇಷ ಆನಂದ ಇರಬೇಕು. ಶಕ್ತಿಯರ ಚೆಹರೆಯು ಸದಾ ಪ್ರಕಾಶಿಸುತ್ತಿರುವಂತೆ ಕಂಡುಬರಬೇಕು, ಏಕೆಂದರೆ ತಂದೆಯು ವಿಶೇಷವಾಗಿ ಮುಂದೆ ಇಟ್ಟಿದ್ದಾರೆ. ಸಾಮಾನ್ಯವಾಗಿ ಯಾವುದಾದರೂ ಅಲ್ಪಕಾಲದ ಪ್ರಾಪ್ತಿ ಆದರೂ ಚೆಹರೆಯಲ್ಲಿ ಅದರ ಛಾಯೆಯು ಕಂಡುಬರುತ್ತದೆ. ಇದು ಎಷ್ಟು ದೊಡ್ಡ ಪ್ರಾಪ್ತಿ ಆಗಿದೆ. ಮಾತೆಯರು ಎಂದೂ ಅಳುವುದಿಲ್ಲ ತಾನೇ. ಎಂದಾದರೂ ಕಣ್ಣಿನಲ್ಲಿ ನೀರು ತುಂಬುತ್ತದೆಯೇ? ಈಗ ಕಣ್ಣುಗಳಲ್ಲಿ ಆತ್ಮೀಯತೆಯು ತುಂಬಿದೆ. ಎಲ್ಲಿ ಆತ್ಮೀಯತೆಯು ಇರುವುದೋ ಅಲ್ಲಿ ಕಂಬನಿಯು ಇರುವುದಿಲ್ಲ. ಪಾಂಡವರು ಕಣ್ಣೀರು ಸುರಿಸಿ ಅಳುತ್ತೀರೋ ಅಥವಾ ಮನಸ್ಸಿನಲ್ಲಿ ಅಳುತ್ತೀರೋ, ಸುಖದ ಸಾಗರದಲ್ಲಿ ತೇಲಾಡುವುವರಾದ ಮೇಲೆ ಅಳು ಎಲ್ಲಿಂದ ಬಂದಿತು? ಅಳುವುದು ದುಃಖದ ಗುರುತಾಗಿದೆ. ಸುಖದ ಸಾಗರದಲ್ಲಿ ತಲ್ಲೀನರಾಗಿರುವವರು ಅಳಲು ಹೇಗೆ ಶಕ್ಯವಿದೆ? ದುಃಖದ ಅಲೆಯು ಸ್ವಪ್ನದಲ್ಲಿಯೂ ಎಂದಿಗೂ ಬರಬಾರದು. ಸ್ವಪ್ನದಲ್ಲಿಯೂ ಸುಖದ ಸ್ವರೂಪ ಅಗಬೇಕು. ಏಕೆಂದರೆ ಸುಖದ ಸಾಗರನು ನಿಮ್ಮ ಸಮೀಪದ ಸಂಬಂಧದಲ್ಲಿ ಬಂದಿದ್ದಾರೆ. ಆದ್ದರಿಂದ ಸದಾ ಸುಖದಲ್ಲಿ ಆನಂದದಲ್ಲಿ ಇರಿ, ಎಂದೂ ಅಳಬೇಡಿರಿ. ಸತ್ಯಯುಗದಲ್ಲಿನ ಪ್ರಜೆಗಳು ಅಳುವರೇನು? ಮತ್ತೆ ಭವಿಷ್ಯದಲ್ಲಿ ರಾಜರಾಗಲಿರುವ ನೀವು ಏಕೆ ಅಳುತ್ತೀರಿ? ಶಕ್ತಿಯರಂತು ಒಂದು ಮಾದರಿ ಆಗಿದ್ದಾರೆ. ಒಂದು ವೇಳೆ ಮಾದರಿ ಆಗಿರುವವರೇ ಅಳುವದಾದರೆ ವ್ಯಾಪಾರವನ್ನು ಹೇಗೆ ಮಾಡುವುದು. ಆದ್ದರಿಂದ ಎಂದಿಗೂ ಅಳಬಾರದು. ಕಂಬನಿಯಿಂದಲೂ ಅಳಬಾರದು, ಮನಸ್ಸಿನಲ್ಲಿಯೂ ಅಳಬಾರದು. ತಿಳಿಯಿತೇ? ಒಳ್ಳೆಯದು. ಓಂ ಶಾಂತಿ ,

ಅವ್ಯಕ್ತ ಮುರಳಿ: 07-12-1978.

*ತಂದೆಯ ಸಮಾನ ಸಂಪೂರ್ಣರಾಗುವ ಗುರುತುಗಳು.*

ಈಗಿನ ಸಂಪೂರ್ಣ ಸ್ಥಿತಿಗೆ ಸಮೀಪವಾಗಿ ಅರ್ಥಾತ್ ಬಾಪ್‌ದಾದಾವರಿಗೆ ಎಷ್ಟು ಸಮೀಪವಿರುತ್ತೀರಿ ಎಂಬುದರ ಆಧಾರದ ಮೇಲೆಯೇ ಇಡೀ ಕಲ್ಪದ ಸಮೀಪತೆ ಅವಲಂಬಿತವಾಗಿರುತ್ತದೆ. ಸಮೀಪದ ಆಧಾರ ಶ್ರೇಷ್ಠತೆ. ಆದ್ದರಿಂದ ಶ್ರೇಷ್ಠವಾಗಿ ಇರಿ. ಶ್ರೇಷ್ಠತೆಗೆ ಆಧಾರ ಸದಾ ಪರೋಪಕಾರಿಯಾಗಿದ್ದೇನೆಯೇ? ಆದಿಯಿಂದ ಅಂತ್ಯದವರೆಗೂ ಸದಾ ಬಾಲ ಬ್ರಹ್ಮಚಾರಿಯಾಗಿದ್ದೇನೆಯೇ? ಎಂದು ಶೋಧಿಸಿಕೊಳ್ಳಿರಿ. ಸದಾ ಬಾಲಬ್ರಹ್ಮಚಾರಿ ಅರ್ಥಾತ್ ಮರುಜೀವ ಜನ್ಮ ಪಡೆದಾಗಿನಿಂದ ಸದಾ ಬ್ರಹ್ಮಾ ತಂದೆಯನ್ನು ಅನುಸರಿಸುವವರು ಅಥವಾ ಆಚರಿಸುವವರು ಎಂದು ಹೇಳುತ್ತಾ ಶಿವಬಾಬಾ ಹೇಳುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

*ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.*

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ನಿರಾಕಾರಿ, ಆಕಾರಿ, ಮತ್ತು ಸಾಕಾರಿ, - ಈ ಮೂರು ಸ್ಥಿತಿಗಳಲ್ಲಿ ಸಹಜವಾಗಿ ಸ್ಥಿತವಾಗಬಲ್ಲ ಸ್ಮೃತಿಯ ಸಮರ್ಥ ಸ್ವರೂಪ.

2. ನಾನು ಅನಾದಿ, ನಿರಾಕಾರಿ, ಅವಿನಾಶಿ ಸ್ವರೂಪದಲ್ಲಿ ಸಂಕಲ್ಪ ಮಾಡಿದಾಕ್ಷಣ ಸ್ಥಿತವಾಗಬಲ್ಲ ತಂದೆಯ ಸಮಾನವಾದ ಸಂಪೂರ್ಣ ಸ್ಥಿತಿ ಅಥವಾ ಕರ್ಮಾತೀತ ಸ್ವರೂಪ.

3. ನಾನು ಸಂಪೂರ್ಣ ಸ್ಥಿತಿಗೆ ಸಮೀಪವಾಗಿ ಇರುತ್ತಾ, ತಂದೆಗೆ ಸಮೀಪವಾಗಿ, ಇಡೀ ಕಲ್ಪದಲ್ಲಿ ಆದಿ ಆತ್ಮ ಬ್ರಹ್ಮಾ ತಂದೆಯ ಸಂಬಂಧ ಸಂಪರ್ಕದಲ್ಲಿ ಇದ್ದೇನೆ.

4. ನಾನು ಸದಾ ಪರೋಪಕಾರಿಯಾಗಿದ್ದು ಆದಿಕಾಲದಿಂದ ಅಂತಿಮದವರೆಗೆ ಸದಾ ಬಾಲಬ್ರಹ್ಮಚಾರಿಯಾಗಿ ಶ್ರೇಷ್ಠವಾಗಿ ಇರುತ್ತಾ ತಂದೆಗೆ ಸಮೀಪವಾಗಿ ಇದ್ದೇನೆ.

5. ನಾನು ಮರುಜೀವ ಜನ್ಮ ಪಡೆದಾಗಿನಿಂದ ಸದಾ ಸ್ವಚ್ಛತೆಯನ್ನು ಅಖಂಡವಾಗಿ ಅರ್ಥಾತ್ ಬ್ರಹ್ಮಾತಂದೆಯ ಸಮಾನವಾದ ಪವಿತ್ರ ಜೀವನವನ್ನು ಅಖಂಡವಾಗಿ ಕಳೆದಿರುವ ಬಾಲಬ್ರಹ್ಮಚಾರಿ. (ಬ್ರಹ್ಮಾ ತಂದೆಯ ಸಮಾನವಾದ ಪವಿತ್ರ ಜೀವನ)

6. ನಾನು ಬ್ರಹ್ಮಾತಂದೆಯ ಸಮಾನವಾಗಿ ಪುರುಷಾರ್ಥದಲ್ಲಿ ಅಖಂಡವಾಗಿ ಇರುತ್ತಾ ಪ್ರಾಪ್ತಿಗಳನ್ನು ಅಖಂಡವಾಗಿ ಅನುಭವ ಮಾಡಿಕೊಂಡು ವೃತ್ತಿ ದೃಷ್ಟಿ ಕರ್ಮದಲ್ಲಿ ಪವಿತ್ರವಾಗಿ ಇರುತ್ತಾ ಕಲೆರಹಿತ ಖಾತೆಯನ್ನು ತಯಾರು ಮಾಡಿಕೊಂಡಿರುವ ಸದಾ ಬ್ರಹ್ಮಾಚಾರಿ. (ಬ್ರಹ್ಮಾಚಾರಿ: ಬ್ರಹ್ಮ ತಂದೆಯನ್ನು ಅನುಸರಿಸುವವರು ಅಥವಾ ಆಚರಿಸುವವರು)

7. ವರ್ತಮಾನ ಸಮಯದಲ್ಲಿ ಬ್ರಹ್ಮಚಾರಿಯಾಗಿರುವ ನನ್ನನ್ನು ಬಾಪ್‌ದಾದಾ ಪೂಜ್ಯ ರೂಪದಲ್ಲಿ ನೋಡಿದರು ಮತ್ತು ಅಂತಿಮದಲ್ಲಿ ನಾನು ಪೂಜ್ಯ ರೂಪದಲ್ಲಿ ಪ್ರತ್ಯಕ್ಷವಾದೆನು.

8. ನಾನು ಆದಿಯಿಂದ ಅಂತಿಮದವರೆಗೂ ಸದಾ ಅಖಂಡ ಬಾಲಬ್ರಹ್ಮಚಾರಿ.

9. ನಾನು ಸದಾ ಪರೋಪಕಾರಿಯಾಗಿ ಇರುತ್ತಾ ಸ್ವತಃವಾಗಿ ಸ್ವ ಉಪಕಾರ ಮಾಡಿಕೊಂಡಿದ್ದೇನೆ.

10. ನಾನು ವಿಶ್ವದ ಪ್ರತಿ ಮತ್ತು ಸರ್ವಬ್ರಾಹ್ಮಣರ ಪ್ರತಿ ಎರಡೂ ಸಂಬಂಧಗಳಲ್ಲಿ ಸದಾ ಪರೋಪಕಾರಿ.